ಶ್ರೀ ರಾಮಕೃಷ್ಣ ಹೆಗಡೆ.—ಮರು ಹಂಚಿಕೆ ಸಾಮಾನ್ಯವಾಗಿ ಆಗುವುದಿಲ್ಲ. ಒಂದೊಂದು ಇಲಾಖೆಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಆ ಇಲಾಖೆಯಲ್ಲೇ ನೇಮಿಸಲಾಗುತ್ತದೆ. ಪಿ. ಎಸ್. ಸಿ. ಯವರು ಏನು ರೆಕಮೆಂಡ್ ಮಾಡುತ್ತಾರೆ ಆ ಪ್ರಕಾರ ಹಂಚಿಕೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮರು ಹಂಚಿಕೆ ಮಾಡತಕ್ಕ ಅಗತ್ಯ ಬೀಳುತ್ತದೆ. ಆಗ ಮಾಡಬೇಕಾಗುತ್ತದೆ. ಉದಾಹರಣೆಗೆ ಆಹಾರ ಖಾತೆಯಲ್ಲಿ ಹೊಸ ಕಾರ್ಯಕ್ರಮ ಜಾರಿಗೆ ತರಲು ಹೆಚ್ಚು ಹುದ್ದೆಗಳು ಬೇಕಾಗಿತ್ತು. ಆಗ ಬೇರೆ ಖಾತೆಗೆ ಆಯ್ಕೆಯಾಗಿದ್ದ ಅಭ್ಯರ್ಥಿಗಳನ್ನು ಈ ಖಾತೆಗೆ ಹಾಕಬೇಕೆಂದು ನಿರ್ಣಯ ಮಾಡಿದ್ದು ನಿಜ. ಸರ್ವೇ ಸಾಮಾನ್ಯವಾಗಿ ಇದನ್ನು ಮಾಡುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಕಾನೂನು ಜಾರಿಯಲ್ಲಿರಬೇಕಾದರೆ ಆ ತರಹ ಮರು ಹಂಚಿಕೆ ಮಾಡುವುದಕ್ಕೆ ಹೇಗೆ ಬರುತ್ತದೆ ? ಅದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೆ ? ಸರ್ವೇ ಸಾಮಾನ್ಯವಾದ ಪರಿಸ್ಥಿತಿಯಲ್ಲಿ ಅಥವಾ ವಿಶೇಷ ಸಂದರ್ಭಗಳಲ್ಲಿ ಮಾಡಬಹುದೆಂದು ಆರ್ಟಿಕಲ್ಲಿನಲ್ಲಿ ಅವಕಾಶ ಇದ್ದರೆ ಮಾಡಬಹುದು. ಇಲ್ಲದೆ ಇದ್ದಾಗ ಮಾಡಿದರೆ ಅದು ತಪ್ಪಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಯಾವ ತರಹದ ನಿಬಂಧನೆಯೂ ಇಲ್ಲ. ೧೯೭೮ ರಲ್ಲಿ ಏನು ಸರ್ವಿಸ್ ರೂಲ್ಸ್ ಮಾಡಿದ್ದೇವೆ ಅದರಲ್ಲಿ ಮರು ಹಂಚಿಕೆ ಮಾಡಕೂಡದು ಎಂಬ ನಿರ್ಬಂಧ ಇಲ್ಲ.

ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ವ್ಯಾಪ್ತಿಯ ಬಗ್ಗೆ

೧೪೧ (೨೭೧) ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿಯ ಕರ್ತವ್ಯಗಳು ಹಾಗೂ ಅದರ ವ್ಯಾಪ್ತಿ ಏನು ?

ಆ) ಈ ಸಮಿತಿಯು ಸರ್ಕಾರದ ಎಲ್ಲಾ ಇಲಾಖೆಗಳ ಮೇಲೆ ವಿಧಿಪತ್ರಾಗಿ ಆದೇಶ ಕೊಡುವ ಹಕ್ಕು ಹೊಂದಿದೆಯೇ ?

ಇ) ಕಾರ್ಯಾಂಗದ ಎಲ್ಲಾ ಇಲಾಖೆಗಳಿಗೂ ಮತ್ತು ಶಾಸಕಾಂಗಕ್ಕೂ ನಿರ್ದೇಶನ ಕೊಡುವ ಹಕ್ಕು ಈ ಸಮಿತಿ ಹೊಂದಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರವು ಈ ಸಮಿತಿಯು ಹೊರಡಿಸಿರುವ ನಿರ್ದೇಶನಗಳು ಮತ್ತು ಹೇಳಿಕೆಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಅನುಬಂಧ ೧ ರಲ್ಲಿ ವಿವರಿಸಿರುವಂತೆ.

ಆ) ಮತ್ತು ಇ) ಆಡಳಿತ ಭಾಷೆಗೆ ಸಂಬಂಧಿಸಿದ ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ ೧೯೬೩ರ ನಿಯಮಗಳನ್ನು ಮತ್ತು ಇದರ ಪ್ರಕಾರ ಹೊರಡಿಸಿರುವ ಅಧಿಸೂಚನೆ ಮುಂತಾದ ಆದೇಶಗಳನ್ನು ಜಾರಿಗೆ ತರುವಲ್ಲಿರುವ ತೊಂದರೆಗಳನ್ನು ಪರೀಕ್ಷಿಸಿ ಸಲಹೆ ನೀಡುವ ಹಕ್ಕನ್ನು ಹೊಂದಿದೆ.

ಈ) ಸಮಿತಿ, ನಿರ್ದೇಶನ ಹಾಗೂ ಹೇಳಿಕೆಗಳನ್ನು ಹೊರಡಿಸಿಲ್ಲ.

ಅನುಬಂಧ—I

ಕರ್ತವ್ಯಗಳು ಹಾಗೂ ಕಾರ್ಯವ್ಯಾಪ್ತಿ :

೧. ಮಹಾಜನ ಆಯೋಗದ ವರದಿಯ ಚೌಕಟ್ಟಿನಲ್ಲಿ ಗಡಿ ವಿಷಯವಾಗಿ ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.

೨. ಸರ್ಕಾರದ ರಾಜ ಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳಿಗೆ ಕಟ್ಟುನಿಟ್ಟಾಗಿ ಪ್ರೇರಿಸಿರುವುದೇ?

೩. ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಿರುವುದೆ, ಹಾಗಿದ್ದರೆ ಅವುಗಳು ಯಾವುವು ?

೪. ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು ?

೫. ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು ?

೬. ಸರ್ಕಾರದ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ಅತ್ಯಂತ ತೃಪ್ತಿಕರವಾಗಿ ಕಾರ್ಯ ರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಅನುಬಂಧ (೧)ರಲ್ಲಿ ಕೆಲವು ಕಾರ್ಯವ್ಯಾಪ್ತಿಯನ್ನು ಹೇಳಿದ್ದಾರೆ. ಅದರ ಪ್ರಕಾರ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆ ಎಂದು ಇದೆ. ಅವರ ಕಾರ್ಯವ್ಯಾಪ್ತಿ ಸಲಹೆಗಳಿಗೇ ಸೀಮಿತವಾಗಿರತಕ್ಕದ್ದೇ ಏನಹ ಪ್ರತಿಯೊಂದು ಕಚೇರಿಗೆ ಭೇಟಿ ಕೊಟ್ಟು ನಿರ್ಬಂಧಗಳನ್ನು ಹಾಕಿ ಬಲಾತ್ಕಾರವಾಗಿ ಇಂಗ್ಲೀಷ್ ಟೈಪ್‌ರೈಟರ್‌ಗಳನ್ನು ಕಿತ್ತುಹಾಕಿ ಕನ್ನಡ ಟೈಪ್‌ರೈಟರ್‌ಗಳನ್ನು ಇಡಬೇಕು, ಕನ್ನಡದಲ್ಲೇ ವ್ಯವಹಾರ ಮಾಡಬೇಕು ಎಂದು ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟ ರೀತಿ ಆಗುತ್ತದೆಯೇ ? ಅವರಿಗೆ ಏನೇನು ಅಧಿಕಾರ ಕೊಟ್ಟಿದ್ದೀರಿ ? ಎರಡನೆಯದು, ಶ್ರೀರಾಮನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾರೆ. ನಮಗೆ ಅವರು ಸ್ನೇಹಿತರು. ಗಣಪತಿ ಪಾಡುವುದಕ್ಕೆ ಹೋಗಿ ಅವರಪ್ಪನನ್ನು ಮಾಡಿದ ಹಾಗೆ ಕಾವಲು ಸಮಿತಿ ಅಧ್ಯಕ್ಷರು ಸಲಹೆ ಮಾಡುವುದು ಬಿಟ್ಟು, ಈಗ ನಿಮ್ಮ ಬೆಂಬಲ ಇದೆ ಎಂದು ಏನು ಬೇಕಾದರೂ ಪ್ರೆಸ್‌ನಲ್ಲಿ ಹೇಳಿಕೆ ಕೊಡುವುದು, ಯಾರಿಗೆ ಬೇಕಾದರೂ ಆದೇಶ ಕೊಡುವುದು, ಏನು ಬೇಕಾದರೂ ಭಾಷೆ ಉಪಯೋಗಿಸುವುದು ಇದಕ್ಕೆ ಅವರಿಗೆ ಅಧಿಕಾರ ಕೊಟ್ಟಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಸಮಿತಿಯ ಅಧಿಕಾರ ಮತ್ತು ವ್ಯಾಪ್ತಿ ಏನು ಎಂದು ಹೇಳುವುದರ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದನ್ನು ಇನ್ನೊಂದು ಸಾರಿ ಬೇಕಾದರೆ ಓದುತ್ತೇನೆ.

ಕರ್ತವ್ಯಗಳು ಮತ್ತು ಕಾರ್ಯವ್ಯಾಪ್ತಿ

೧. ಮಹಾಜನ ಆಯೋಗದ ವರದಿಯ ಚೌಕಟ್ಟಿನಲ್ಲಿ ಗಡಿ ವಿಷಯವಾಗಿ ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.

೨. ಸರ್ಕಾರದ ರಾಜ ಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪ್ರಯತ್ನಿಸಿರುವುದೇ ?

೩. ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಿರುವುದೆ ? ಹಾಗಿದ್ದಲ್ಲಿ ಅವುಗಳು ಯಾವುವು ?

೪. ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು ?

೫. ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು ?

೬. ಸರ್ಕಾರದ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ಅತ್ಯಂತ ತೃಪ್ತಿಕರವಾಗಿ ಕಾರ್ಯ ರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೆ ?

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ, ಸರ್ಕಾರದ ಅಧೀನದಲ್ಲಿ ಕೆಲಸ ಮಾಡತಕ್ಕ ಸಂಸ್ಥೆಗಳಲ್ಲಿ ಕನ್ನಡವೇ ಅದರ ವ್ಯವಹಾರದ ಭಾಷೆ ಆಗಬೇಕು ಎನ್ನುವಂಥದ್ದು ಸರ್ಕಾರದ ಉದ್ದೇಶ ಇದ್ದಾಗ ಆ ಉದ್ದೇಶವನ್ನು ಜಾರಿಯಲ್ಲಿ ತರತಕ್ಕ ಜವಾಬ್ದಾರಿ ಅವರಿಗೆ ಕೊಟ್ಟಿದ್ದೇವೆ. ಈ ಸಮಿತಿಯ ಅಧ್ಯಕ್ಷರು ಬೇರೆ ಬೇರೆ ಇಲಾಖೆ ಕಾರ್ಯದರ್ಶಿಗಳಿಗೆ ಇಲಾಖೆಯ ಮುಖ್ಯಸ್ಥರಿಗೆ, ಡೆಪ್ಯುಟಿ ಕಮಿಷನರ್ ಅವರಿಗೆ, ತಹಸೀಲ್ದಾರ್ ಅವರಿಗೆ, ಅಸಿಸ್ಟೆಂಟ್ ಕಮಿಷನರ್ ಅವರಿಗೆ, ಡಿವಿಷನಲ್ ಕಮಿಷನರ್ ಅವರಿಗೆ ಪತ್ರ ಬರೆದರೆ ಅದು ಅಪರಾಧ ಅಲ್ಲ. ಅವರ ಮೇಲೆ ಒಂದು ಜವಾಬ್ದಾರಿಯನ್ನು ಹಾಕಿದ್ದೇವೆ. ಈ ಸದನದಲ್ಲಿ ಇದರ ಬಗ್ಗೆ ಒಪ್ಪಿಗೆ ಸಿಕ್ಕಿದೆ. ನಮ್ಮ ರಾಜ್ಯದಲ್ಲಿ ಸರ್ಕಾರದ ವ್ಯವಹಾರೀಕ ಭಾಷೆಯಾಗಿ ಕನ್ನಡವೇ ಆಗಬೇಕೆಂಬುದನ್ನು ಕಳೆದ ೩೦ ವರ್ಷಗಳಲ್ಲಿ ಜಾರಿಯಲ್ಲಿ ತರುವುದಕ್ಕೆ ಸಾಧ್ಯವಾಗರಲಿಲ್ಲ. ಹೀಗಿದ್ದಾಗ ಒಂದು ಕಮಿಟಿಗೆ ಜವಾಬ್ದಾರಿಯನ್ನು ಹೊರಿಸಿದರೆ ಅವರು ಇದರಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿ ಯಾರು

ತಪ್ಪು ಮಾಡಿರುತ್ತಾರೆ, ಯಾರಿಗೆ ಆಸಕ್ತಿ ಇಲ್ಲ ಎನ್ನುವುದನ್ನು ಕಂಡುಹಿಡಿದು ಸರ್ಕಾರಕ್ಕೆ ಸಲಹೆ ಕೊಟ್ಟು ಅಂಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಅವರು ಸಹಾಯ ಮಾಡುತ್ತಾರೆ. ಇದೇ ಅದರ ಉದ್ದೇಶ. ಆದ್ದರಿಂದ ಈ ಒಂದು ಜವಾಬ್ದಾರಿಯನ್ನು ನಿರ್ವಹಿಸಿದಾಗ ಅವರು ಕೆಲವೊಂದು ಕ್ರಮವನ್ನು ತೆಗೆದುಕೊಂಡಿದ್ದರೆ ಅದು ಅಕ್ರಮ ಎಂದು ಹೇಳಲಿಕ್ಕೆ ನಾನು ಸಿದ್ಧನಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಪಾಟೀಲ್ ಪುಟ್ಟಪ್ಪನವರು ಇದರ ಅಧ್ಯಕ್ಷರು. ಅವರು ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕು. ನಾನೂ ಮಂತ್ರಿಯಾಗಿ ಬಹಳ ವರ್ಷ ಕೆಲಸ ಮಾಡಿದ್ದೇನೆ. ತಾವು ಸಲಹೆಗಳನ್ನು ಕೊಡಬೇಕು ಎಂದು ಸಮಿತಿಗಳನ್ನು ಮಾಡಿದ್ದೀರಿ, ಅವು ಸಲಹೆಗಳನ್ನು ಕೊಡಲಿ. ಅದರ ಬಗ್ಗೆ ನನಗೆ ಅಭ್ಯಂತರ ಇಲ್ಲ. ಆದರೆ ಸಲಹೆಗಳನ್ನು ಸಂಗ್ರಹ ಮಾಡಿ ಬೇರೆಯವರಿಗೆ ಆದೇಶ ಕೊಡತಕ್ಕದ್ದು, ಜಿಲ್ಲಾಧಿಕಾರಿಗಳವರ ಬಗ್ಗೆ ಬೇರೆ ಅಧಿಕಾರಿಗಳ ಬಗ್ಗೆ ಯಾರು ಯಾರು ಕನ್ನಡ ಉಪಯೋಗಿಸುವುದಿಲ್ಲವೋ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಲಹೆ ಬೇಕೆಂದು ಹೇಳುವುದಾದರೆ ಸರ್ಕಾರಿ ಹುಕುಮ್ ಏನಿದೆ ಅದನ್ನು ಬದಲಾವಣೆ ಮಾಡಿ ಇವರನ್ನು ಸೂಪರ್ ಚೀಫ್ ಮಿನಿಸ್ಟರ್ ಮಾಡಿ ಇವರು ಮಾಡತಕ್ಕ ಕೆಲಸವನ್ನು ಅವರು ಮಾಡತಕ್ಕದ್ದು ಎಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನಿಮ್ಮ ಕೆಲಸವನ್ನು ಅವರೇ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಟ್ಟ ಹಾಗಿದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಅವರು ಭಾಷಣ ಮಾಡುತ್ತಿದ್ದಾರೆಯೇ?

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಜಿ. ನಾರಾಯಣಕುಮಾರ್.—ಇವರು ನಿನ್ನೆ ಇಂಗ್ಲೀಷಿನವರಾದರು. ಕನ್ನಡದ ಬಗ್ಗೆ ಇವರಿಗೆ ಕಳಕಳಿ ಯಾಕೆ? (ಗೊಂದಲ) ಕನ್ನಡದವರಾದ ನಾವು ಕನ್ನಡ ಮಾತನಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಆಯಿತೇ ನಿಮ್ಮದು? ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಉತ್ತರ ಕೊಡುವುದಕ್ಕೆ ಶಕ್ತಿ ಇದೆ. ನಿಮ್ಮ ಬೆಂಬಲ ಅವರಿಗೆ ಅವಶ್ಯಕತೆ ಇಲ್ಲ. ಇಲ್ಲಿ ಮಾನ್ಯ ಸ್ಪೀಕರ್ ಅವರು ಇದ್ದಾರೆ.

ಅಧ್ಯಕ್ಷರು.—ತಾವು ವಿಷಯಕ್ಕೆ ಬನ್ನಿ.

ಶ್ರೀ ಬಿ. ಬಸವಲಿಂಗಪ್ಪ.—ಅಂಕಿಅಂಶಗಳ ಸಂಗ್ರಹಣೆಯ ಬಗ್ಗೆ ಅಧಿಕಾರವನ್ನು ಕೊಟ್ಟಿದ್ದೀರಿ. ಅವರು ಸಂಗ್ರಹಣೆ ಮಾಡಿಕೊಳ್ಳಲಿ. ಮಾನ್ಯ ಸ್ಪೀಕರ್ ಆದಿಯಾಗಿ ಪ್ರತಿಯೊಬ್ಬರಿಗೂ ಕೂಡ ಈ ನಮ್ಮ ಸದಸ್ಯರಿಗೆ ಅಗೌರವ ಆಗುವ ರೀತಿಯಲ್ಲಿ ಬರೆಯುವುದಕ್ಕೆ ಅವರಿಗೆ ಅಧಿಕಾರವನ್ನು ಕೊಟ್ಟಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು, ಅವರು ಸೂಪರ್ ಚೀಫ್ ಮಿನಿಸ್ಟರ್ ಎಂದು ಹೇಳಿದರು. ಅದು ನನಗೆ ಅರ್ಥ ಆಗುತ್ತಾ ಇಲ್ಲ. ನನಗೆ ಈ ಒಂದು ಸಲಹಾ ಸಮಿತಿಯಿಂದ ಬಹಳ ಸಹಾಯವಾಗಿದೆ. ಸಮ್ಮ ಪಕ್ಷದ ಸದಸ್ಯರ ಬೆಂಬಲ ನನಗೆ ಬೇಡ ಎಂದು ಅವರು ಹೇಳಿದರು. ಅವರ ಬೆಂಬಲ ಇರುವುದರಿಂದಲೇ ನಾನು ಇಲ್ಲಿ ಇದ್ದೇನೆ. ಆದುದರಿಂದ ನಾನು ಬಸವಲಿಂಗಪ್ಪನವರಿಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮಾನ್ಯ ಪಾಟೀಲ್ ಪುಟ್ಟಪ್ಪನವರ ಬಗ್ಗೆ ವೈಯಕ್ತಿಕವಾಗಿ ಅಭಿಪ್ರಾಯ ಏನೇ ಇದ್ದರೂ ಇರಲಿ, ಆದರೆ ಈ ಒಂದು ಸಮಿತಿಯ ಅಧ್ಯಕ್ಷರಾಗಿ ಹಾಗೂ ಯಾರು ಸದಸ್ಯರಾಗಿ ಇದ್ದಾರೆ ಅವರುಗಳು ಕಳೆದ ಎರಡು ವರ್ಷಗಳ ಅವಧಿಯಲ್ಲಿ, ಹಿಂದೆ ೨೦ ವರ್ಷಗಳಲ್ಲಿ ಮಾಡದಂತಹ ಒಂದು ಕೆಲಸವನ್ನು ಮಾಡಿ ತೋರಿಸಿದ್ದಾರೆ. ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡಿ, ಈ ಒಂದು ಒತ್ತಾಯ ಅವರಿಗೆ ಬರದೇ ಇದ್ದರೆ, ಪುನಃ ಪುನಃ ಪ್ರಯತ್ನಗಳು ನಡೆಯದೇ ಇದ್ದರೆ ಇಷ್ಟು ತ್ವರಿತವಾಗಿ ಆ ಒಂದು ನಿರ್ಣಯವನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯ ಆಗುತ್ತಾ ಇರಲಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕು.

ಅಧ್ಯಕ್ಷರು.—ಈಗ ಶ್ರೀಮಣಿಯವರ ಪ್ರಶ್ನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಗಳು ಇವರು ಇಲ್ಲದಿದ್ದರೆ ಜಗತ್ತೇ ಮುಂದೆ ಬರುತ್ತಾ ಇರಲಿಲ್ಲ ಎಂದು ಬಹಳ ಜೀನ್ಯಾಗಿ ಹೇಳಿದ್ದಾರೆ. ಮಾನ್ಯ ರಾಮಕೃಷ್ಣ ಹೆಗ್ಡೆಯವರು ಮಾಡಿರುವ ಈ ಕೆಲಸಕ್ಕೆ ಕೃತಜ್ಞತೆಯನ್ನು ಸಲ್ಲಿಸೋಣ. ತಪ್ಪಿಗೆ ಗೊತ್ತು ಇದೆಯೋ ಇಲ್ಲವೋ, ಮಾನ್ಯ ಪಾಟೀಲ್ ಪುಟ್ಟಪ್ಪನವರು ಡಿ.ಸಿ. ಗಳ ಹತ್ತಿರ ಯೋಗವನ್ನು ಹಾಗೂ ಕೇಳಿಸುವುದು.

ಮಾನ್ಯ ಕೆ.ಹೆಚ್. ಪಾಟೀಲರು ಪತ್ರ ಬರೆದಿದ್ದಾರೆಯೇ? ಬರೆದಿದ್ದರೆ ಯಾವ ಭಾಷೆಯಲ್ಲಿ ಬರೆದಿದ್ದಾರೆ, ರಾಮಕೃಷ್ಣ ಹೆಗಡೆಯವರು ಪತ್ರ ಬರೆದಿದ್ದರೆ ಯಾವ ಭಾಷೆಯಲ್ಲಿ ಬರೆದಿದ್ದಾರೆ, ಬಸವಲಿಂಗಪ್ಪನವರು ಪತ್ರ ಬರೆದಿದ್ದರೆ ಏನು ಬರೆದಿದ್ದಾರೆ, ಇಂಗ್ಲೀಷ್‌ನಲ್ಲಿ ಬರೆದಿದ್ದಾರೋ ಕನ್ನಡದಲ್ಲಿ ಬರೆದಿದ್ದಾರೋ ಎಂದು ಕೇಳುವುದು. ಆ ನಂತರ ನಮಗೆ ಸೂಚನೆ ನೀಡುವುದು. ಇದೆಲ್ಲಾ ಆದ ಮೇಲೆ ನಾನು ಇಂಗ್ಲೀಷಿನಲ್ಲೇ ಬರೆಯುವುದಕ್ಕೆ ಪತ್ತಿದ್ದೇನೆ. ಇಂತಹ ಅವಿವೇಕತನಕ್ಕೆ ಅವಕಾಶ ಕೊಡಬಾರದು, ಇವರು ಒಂದಿನ ತಿಂಗಳು ಪೇಪರ್ ಅಡ್ವೈರ್‌ಟೈಸ್‌ಮೆಂಟ್‌ಗೆ ಲಕ್ಷಗಟ್ಟಲೆ ಹಣವನ್ನು ತೆಗೆದುಕೊಂಡಿದ್ದಾರೆ. ಅದು ನಿಮ್ಮ ಗಮನಕ್ಕೆ ಬಂದಿದೆಯೇ? ಇದು ಕರಪ್‌ಷನ್ ಅಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಪೇಪರ್‌ಗೆ ಆಡ್‌ವರ್‌ಟೈಸ್ ಏನು ಹಣ ತೆಗೆದುಕೊಂಡಿದ್ದಾರೆಂದಿದ್ದಾರೆ ಆ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಸಂತೋಷದಿಂದ ಉತ್ತರ ಕೊಡುತ್ತೇನೆ. ಆದರೆ ಅವರಿಗೆ ಕೊಟ್ಟಿರತಕ್ಕ ಜವಾಬ್ದಾರಿ ಏನೆಂಬುದನ್ನು ಮತ್ತೊಮ್ಮೆ ಓದುತ್ತೇನೆ.

''ಸರ್ಕಾರದ ರಾಜ್ಯಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟು ನಿಟ್ಟಾಗಿ ಪ್ರಯತ್ನಿಸಿರುವುದೇ?''

ಇವರು ಡಿ.ಸಿ.ಯವರ ಹತ್ತಿರ ಹೋಗಿ ನಿಮಗೆ ಡೈರೆಕ್ಟರ್‌ರವರಿಂದ, ಕಮಿಷನರ್‌ರವರಿಂದ ಅಥವಾ ಸೆಕ್ರೆಟರಿಗಳವರಿಂದ ಪತ್ರಗಳು ಬಂದಿದ್ದರೆ ಅವು ಕನ್ನಡದಲ್ಲಿ ಬಂದಿವೆಯೋ ಅಥವಾ ಇಂಗ್ಲೀಷಿನಲ್ಲಿ ಬರುತ್ತಿವೆಯೋ ಎಂದು ಕೇಳಿದರೆ ತಪ್ಪು ಏನು? ಅಥವಾ ಮಾನ್ಯ ಕೆ.ಹೆಚ್. ಪಾಟೀಲರು ಸ್ವತಂತ್ರರು, ಅವರು ಯಾವ ಭಾಷೆಯಲ್ಲಿ ಬೇಕಾದರೂ ಪತ್ರ ವ್ಯವಹಾರ ಮಾಡಲಿ ಅದಕ್ಕೆ ನಮ್ಮ ಆಕ್ಷೇಪ ಇಲ್ಲ. ಶ್ರೀ ಮಾನ್ ಕೆ. ಹೆಚ್. ಪಾಟೀಲರು ಸರ್ಕಾರಿ ನೌಕರರೇನು? ಅಲ್ಲ. ಆದರೆ ಸರ್ಕಾರಿ ನೌಕರರ ಕರ್ತವ್ಯ ಇವತ್ತು ಏನು ಎಂದರೆ ಸರ್ಕಾರದ ನಿರ್ಣಯವನ್ನು ಜಾರಿಗೆ ತರುವುದು. ಕನ್ನಡ ರಾಜ್ಯಭಾಷೆ ಆಗಬೇಕು, ಸರ್ಕಾರಿ ಭಾಷೆಯಾಗಬೇಕು ಎಂಬುದು ನಮ್ಮ ನಿರ್ಣಯ. ಅದು ಜಾರಿಗೆ ಬಂದಿದೆಯೇ ಎಂಬುದನ್ನು ಕಂಡುಹಿಡಿಯುತಕ್ಕಂತಹ ಜವಾಬ್ದಾರಿ ಈ ಸಮಿತಿಗೆ ಇದೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ,.....

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಬಸವಲಿಂಗಪ್ಪನವರು ಅವರ ಸರ್ಕಾರ ಇದ್ದಂತಹ ಕಾಲದಲ್ಲಿ ಕನ್ನಡ ರಾಜ್ಯಭಾಷೆಯನ್ನಾಗಿ ಮಾಡಲಾಗಲಿಲ್ಲ. ಈಗ ಜನತಾ ಸರ್ಕಾರ ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡಿರುವುದಕ್ಕೆ ಸಹಿಸಿಕೊಳ್ಳಲಾರದೆ ಇದು ಸರಿಯಲ್ಲ. ತಾವು ಅವಕಾಶ ಕೊಡಬಾರದು.

ಶ್ರೀ ಬಿ. ಬಸವಲಿಂಗಪ್ಪ.—ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಾ?

ಅಧ್ಯಕ್ಷರು.—ಇಲ್ಲ, ಇಲ್ಲ.

ಕೆ.ಜಿ.ಎಫ್.ನಲ್ಲಿ ಮುದ್ರಿಸಲಾದ ಖೋಟಾ ನೋಟುಗಳು

೧೪೨ (೩೦೦ ಬಿ) ಶ್ರೀ ಟಿ.ಎಸ್. ಮಣಿ (ಕೆ.ಜಿ.ಎಫ್.).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೆ.ಜಿ.ಎಫ್.ನಲ್ಲಿ ಖೋಟಾ ನೋಟು ಮುದ್ರಣದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ?

ಆ) ಹಾಗಿದ್ದ ಪಕ್ಷದಲ್ಲಿ ಅದರ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಿ?

ಇ) ಈ ಸಂಬಂಧದಲ್ಲಿ ಆಪಾದಿತರ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ? ಹಾಗೂ ಅಪರಾಧಿಗಳ ಹೆಸರು, ವಿಳಾಸ ನೀಡುವುದು?

ಈ) ಈ ಕೇಸಿನ ತನಿಖೆಯು ಬೇರೆ ರಾಜ್ಯಕ್ಕೂ ಸಂಬಂಧಿಸಿರುವುದರಿಂದ ಮುಂದಿನ ತನಿಖೆಯನ್ನು ಸಿ.ಬಿ.ಐ.ಗೆ ಒಪ್ಪಿಸಿಕೊಡಬಹುದೆ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು),—

ಅ) ಬಂದಿದೆ.